ಪಂಚಾಯಿತಿಯ ಅಧ್ಯಕ್ಷ ಅವರೂ ಕೂಡ ಅದರ ಸದಸ್ಯರಾಗಿರುತ್ತಾರೆ. ಉಳಿದಂತೆ ಅಧಿಕಾರಿಗಳೂ ಕೂಡ ಆ ಸಮಿತಿಯಲ್ಲಿರುತ್ತಾರೆ. ಕುಡಿಯುವ ನೀರನ್ನು ಕೊಡಬೇಕಾದರೆ ಬೇಕಾದಂತಹ ಇ. ಓ. Assistant Executive Engineers ಇತ್ಯಾದಿ ಈ ತರಹದ ಅಧಿಕಾರಿಗಳು ಯಾರಿರುತ್ತಾರೋ, ಆ ಅಧಿಕಾರಿಗಳೂ ಕೂಡ ಅದರಲ್ಲಿ ಇರುತ್ತಾರೆ. ಈ ರೀತಿ ಸಮಿತಿ ಇರುತ್ತದೆ. ಎಲ್ಲಿಯವರೆಗೆ ಕುಡಿಯುವ ನೀರಿನ Scarcity ಇದೆ ಅಲ್ಲಿಯವರೆಗೆ ಅಥವಾ Scarcity ಇರುವವರೆಗೆ ಸರ್ಕಾರ ಈ ತರಹದ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗತಕ್ಕಂಥ ಕೆಲಸ ಮಾಡುತ್ತದೆ. ಮಳೆ ಬಂದಾಗ, ಕುಡಿಯುವ ನೀರಿನ ಸಮಸ್ಯೆ ಇಲ್ಲದಿದ್ದಾಗ ಈ ಪರಿಸ್ಥಿತಿ ಉದ್ಭವವಾಗುವುದೇ ಇಲ್ಲ. ಶಾಸಕರು ಟಾಸ್ಕ್ ಫೋರ್ಸ್‌ನಲ್ಲಿ ಇರಬೇಕು. ರೆಗ್ಯೂಲರ್ ಪ್ರೋಗ್ರಾಮ್ಸ್‌ಗಳಿಗೆಲ್ಲಾ ತಾಲ್ಲೂಕು ಪಂಚಾಯಿತಿಯವರು ಇರುತ್ತಾರೆ, ಜಿಲ್ಲಾ ಪಂಚಾಯಿತಿಯವರು ಇರುತ್ತಾರೆ, ಅವರು ಅದನ್ನು ನೋಡಿಕೊಳ್ಳುತ್ತಾರೆ. ರೆಗ್ಯೂಲರ್ ಪ್ರೋಗ್ರಾಮ್ಸ್‌ಗೆ ಯಾವುದೇ ಹಣದ ಕೊರತೆ ಇಲ್ಲ. ಈಗಾಗಲೇ ಸುಮಾರು 150 ಕೋಟಿ ರೂಪಾಯಿಗಳಷ್ಟು ಹಣವನ್ನು ಜಿಲ್ಲಾ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ್ದೇವೆ. ಈ ವರ್ಷಕ್ಕೆ ಯಾವುದೇ on going projects ಅಥವಾ ಕಾರ್ಯಕ್ರಮಗಳಿಗೆ ಯಾವ ವಿಧವಾದಂತಹ ಹಣದ ಕೊರತೆ ಇಲ್ಲ. ಹಣದ ಕೊರತೆಯಿಂದಾಗಿ ನೀರನ್ನು ಒದಗಿಸಲು ತೊಂದರೆಯಾಗಿದೆ ಎನ್ನತಕ್ಕಂಥದ್ದೂ ಕೂಡ ಇಲ್ಲ ಎಲ್ಲೆಲ್ಲಿ ತುರ್ತಾಗಿ ಹಣವನ್ನು ಒದಗಿಸಿ ಕೊಡಬೇಕಾಗುತ್ತದೋ, ಅದನ್ನೆಲ್ಲಾ ನಾವು ಒದಗಿಸಿಕೊಡುತ್ತೇವೆ. ತುರ್ತಾಗಿ ನೀರು ಬೇಕಾಗುವ ಕಡೆಗೆ ಹಣ ಕೊಡುತ್ತೇವೆ. ಶಾಸಕರು ಎಲ್ಲಿ ನೀರು ಕೊಡಲಿಕ್ಕೆ Suggest ಮಾಡುತ್ತಾರೋ, ಎಲ್ಲಿ ಅವರು ಆಗಲೇಬೇಕು ಎಂದು ತೀರ್ಮಾನ ಮಾಡುತ್ತಾರೋ, ಆ ಕೆಲಸ ಸರ್ಕಾರ ಮಾಡುತ್ತದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ. ಬಹುಶಃ ಅವರು ಪ್ರಸ್ತಾಪಿಸಿರತಕ್ಕಂಥ ಎಲ್ಲಾ ಪ್ರಶ್ನೆಗಳಿಗೂ ಕೂಡ ಸಮಂಜಸವಾದಂತಹ, ತೃಪ್ತಿಕರವಾದಂತಹ, ಸಮಾಧಾನಕರವಾದಂತಹ ಉತ್ತರ ನೀಡಿದ್ದೇನೆ ಎಂದು ನಾನು ಭಾವಿಸಿಕೊಂಡಿದ್ದೇನೆ.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಮತಿಗೆಟ್ಟ ಆಸ್ಪತ್ರೆ ಬಗ್ಗೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಆರೋಗ್ಯ ಸಚಿವರು ಮತಿಗೆಟ್ಟ ಆಸ್ಪತ್ರೆ ಬಗ್ಗೆ ಒಂದು ಹೇಳಿಕೆ ಮಾಡಬೇಕಾಗಿದೆ.

ಅಧ್ಯಕ್ಷರು:– ಫರ್ಡ್ದು ನಾಳೆ ತೆಗೆದುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ:– ತಾವು ಏನು ರಿಪ್ಲೈ ಮಾಡುತ್ತೀರಿ ಅದರ ಕಾಪಿಗಳು ಬಂದಿಲ್ಲ.